ನುಡಿಸ್ತಾನ. ಇದರೊಳಗ ನೃತ್ಯ ಐತಿ, ಹಾಡ್ತಾರ, ಹಾಸ್ಯ ಬರ್ತದ, ವಾದ್ಯಗಳಿದಾವ. ಎಲ್ಲ ಸೇರಿಕೊಂಡ ಮಿಶ್ರಣ ಇದು. ಗೊಂದಲದ ಕತಿ ಹೇಳೋ, ವಾದ್ಯ ನುಡಸೋ ನಮ್ಮ ಜನ ಕಡಿಮೆ ಆಗ್ಯಾರ. ಪಾರಂಪರಿಕವಾಗಿ ಪೂರ್ವಜರಿಂದ ಬಂದ ನೆನಪುಗಳು ಅಷ್ಟು ತೀವ್ರವಾಗಿ, ಫಲಕಾರಿಯಾಗಿ ಬರೋದಿಲ್ರಿ. ಯಾಕಂದ್ರ ನಾವು ಹೇಳೋ ಕತಿಗೂ, ನಮ್ಮ ಬದುಕಿನ ಕ್ರಮಕ್ಕೂ ಸಂಬಂಧ ಇರ್ತತಿ. 'ಗೊಂದಲಿಗರ ಕತೆ'ಗಳು ಅನ್ನಾವು ಬಹಳ ವರ್ಷಗಳಿಂದ ನಮ್ಮ ಹಿರೀಕರು ಹೇಳ್ತಾ ಬಂದ ಕತಿಗಳು. ಅದಕ್ಕೊಂದು ಶೈಲಿ ಇರ್ತಾದ. ಅದು ಗೊಂದಲಿಗರಿಗೇನೆ 'ವಿಶೇಷ'ವಾದ ಶೈಲಿ. ಆ ಶೈಲಿ ನಮ್ಮ ಬದುಕಿನ ಕಷ್ಟ, ಸುಖದಿಂದಾನ ಹುಟ್ಯಾದ. ಗೊಂದಲಿಗರು ಕತೆ ಹೇಳೂವಾಗ ಬರೀ ಕತೆ ಹೇಳಾಕೆ ಅಂತಾನೆ ಹೇಳೂದಿಲ್ಲ, ಇದೊಂದು ಮನರಂಜನೆ ಮಾರ್ಗ ಆದ್ರೂ, ಇದನ್ನ ಧಾರ್ಮಿಕ ವಿದ್ಯಮಾನ ಅಂತ ನೋಡ್ತಾರ. ಹಿಂದೆಯೆಲ್ಲ ಮದುವೆ ಸಂದರ್ಭದಲ್ಲಿ ಗೊಂದಲಿಗರಲ್ಲದವರು ಗೊಂದಲಿಗರ ಹತ್ತಿರ ಕತೆ ಹಾಕಸ್ತೀವಿ ಅಂತ ದೇವರಲ್ಲಿ ಹರಕೆ ಮಾಡ್ತಿದ್ರು. ಬೇರೆ ಸಮುದಾಯದ ಹೋಲಿಕೇಲಿ ಬ್ರಾಹ್ಮಣ ಸಮುದಾಯದವರು ನಮ್ಮಿಂದ ಹೆಚ್ಚು ಕತೆ ಹೇಳಿಸ್ತಿದ್ರು.

◆ **ಅದ್ಯಾಕೆ?**

ಬಹುಶಃ ತಮಗೆ ಒಳ್ಳೆಯದಾಗುತ್ತೆ ಅನ್ನೋದು ಅವರ ನಂಬಿಕೆ ಇರಬಹುದು. ಅದು ಹಾಗೇ ಬೆಳೆದು ಬಂದಿದೆ ಅನ್ನಿಸ್ತದ. ಇವತ್ತಿಗೂ ಕೂಡ ಕೆಲವು ಬ್ರಾಹ್ಮಣ ಕುಟುಂಬಗಳು ಕಡ್ಡಾಯವಾಗಿ ಗೊಂದಲಿಗರಿಂದ ಕತೆ ಹೇಳಿಸ್ತಾರ. ಧಾರ್ಮಿಕ ಉದ್ದೇಶವೇ ಇದರ ಹಿಂದೆ ಮುಖ್ಯವಾಗಿ ಇರೋ ಹಂಗ ಕಾಣಸ್ತದ. ಗೊಂದಲ ಹೇಳುವ ಸಂದರ್ಭದಲ್ಲಿ ಗೊಂದಲಿಗರು ಅವರಿಗೆ ಪೂಜ್ಯರಾಗಿ ಕಾಣಿಸ್ತಾರ. ಆ ಕಾರ್ಯಕ್ರಮ ಮುಗಿದ ಮೇಲೆ ಅದೇ ಬ್ರಾಹ್ಮಣರಿಗೆ ಅಸ್ಪೃಶ್ಯರಾಗಿ ಬಿಡ್ತಾರ!

◆ **'ಗೊಂದಲದ ಕತೆ' ಅನ್ನುವ ಸಂಸ್ಕೃತಿನಿಷ್ಠ ಬದುಕು ಮತ್ತು ವಾಸ್ತವ ಬದುಕಿನ ನಡುವಿನ ಹೊಯ್ದಾಟವನ್ನು ನೀವು ಹೇಗೆ ನೋಡುತ್ತೀರಾ?**

ನನ್ನ ಬಾಲ್ಯಕಾಲದಲ್ಲಿ 'ಗೊಂದಲದ ಕತೆ' ಹೇಳೋದು, ಬುಡಬುಡಕಿ ಬಾರಿಸುತ್ತ ಹಕ್ಕಿ ಶಕುನ ಹೇಳೋದು, ಪಂಚಾಂಗದಿಂದ ಭವಿಷ್ಯ ಹೇಳೋದು – ಇವನ್ನ ಭಿಕ್ಷಾಟನೆ ಎಂದೇ ಉಳಿದ ಜಾತಿಯವರು ಭಾವಿಸಿದ್ದರು. ಇತ್ತೀಚೆಗೆ ಜಾನಪದ ಕಲೆಗಳನ್ನು ಹೊಸದೃಷ್ಟಿಯಿಂದ ನೋಡುವ ಮನೋಭಾವ ಬೆಳೆದ ಮೇಲೆ ಗೊಂದಲಿಗರ ವೃತ್ತಿಗಳೂ ಕೂಡ ಕಲೆಗಳಾಗಿ ಕಾಣುತ್ತಿವೆ.

ಎಲ್ಲ ಜಾನಪದ ಕಲೆಗಳೂ ಜೀವ ಕಳಕೊಳ್ತಾ ಇರೋ ಈ ಹೊತ್ತಲ್ಲಿ 'ಗೊಂದಲದ ಕತೆ' ಹೇಳಾವ್ರೂ ಕಡಿಮೆ ಆಗ್ಯಾರ. ಸಂಸ್ಕೃತಿಯ ಅದೊಂದು ಭಾಗ ಕಡಿದು ಹೋಗ್ತಿದೆ. ಇದು ಅನಿವಾರ್ಯವೋ ಏನೋ... ದುಡ್ಡಿನ ದಿನಮಾನ ಆಗಿರೋ ಇವತ್ತು ಅದರಿಂದ ಹೊಟ್ಟೆ ತುಂಬಾಗಿಲ್ಲಲ್ರಿ... ಈಗೆಲ್ಲ ಜನ ವ್ಯಾಪಾರಕ್ಕೆ ಇಳಿದಾರ, ಜೋತಿಷ ಹೇಳ್ತಾರ... ಸಮಾಜದ ಕೆಲವೊಂದು ವಿಚಾರಗಳು ಏನು ಪರಿವರ್ತನೆ ಮಾಡ್ತಾವೋ ಅವು ಎಲ್ಲ ಸಮುದಾಯಗಳಲ್ಲೂ ಸಮಾನಾಂತರವಾಗಿ ಪರಿವರ್ತನೆ ಮಾಡ್ತಾವ. ಅಂದ್ರ... ನೋಡಿ, ಹಳ್ಳಿಗಳಲ್ಲಿ ಹಿಂದೆ ಕ್ಷೌರಿಕರಿದ್ರು, ಮನೆಮನೆಗೆ ಹೋಗಿ ಕ್ಷೌರದ ಕೆಲಸ ಮಾಡ್ತಿದ್ರು. ಇವತ್ತು ಬಂಡವಾಳ ಹಾಕಿ ಪಾಶ್ ಅಂಗಡಿ ಮಾಡಿ ದುಡಿಮೆ ಮಾಡ್ತಾರ. ಜಾತಿಗಾರ್ರು ಅಂತ ಹಳ್ಳಿಗಳಲ್ಲಿ ಇದ್ರು. ಇವ್ರು ದನಗಳ ಕಾಲಿನ ಗೊರಸು ಕತ್ತರಿಸಿ ಮಾರಿ ಬದುಕುತ್ತಿದ್ರು. ಈಗ ಈ ಜನಾನೇ ಕಾಣೋದಿಲ್ಲ. ಕರಡಿ ಕುಣಿಸೋವ್ರು ಇದ್ರು, ಅವರು ಎಲ್ಲೆಲ್ಲಿ ಹೋದ್ರೋ? ಗೊಂದಲಿಗರದೂ ಇದೇ ಕತಿ ಐತ. ನಮ್ಮೆಲ್ಲರ ಮೂಲ ಜೀವನಕ್ರಮ ಬದಲಿಸಿದ್ದು ಆರ್ಥಿಕ ಸಮಸ್ಯೆ ಅನ್ನಿಸ್ತದ. ವರ್ತಮಾನಕ್ಕೆ ತಕ್ಕಂಗ ಬದುಕಲಿಕ್ಕೆ ಬೇಕಾಗುವಷ್ಟು ದುಡಿಮೆ ಯಾವುದೈತಿ ಅನ್ನೋ ಕಡೆ ಎಲ್ಲ ಲಕ್ಷ್ಯ ಕೊಟ್ಟುಕೊಂಡು ಹೋಗ್ತಾರ. ಇದರಿಂದ ಏನೇನೋ ನಶಿಸಿ ಹೋಗ್ತದ. ಎಲ್ಲೋ ಒಂದೊಂದು ಕುಟುಂಬಗಳು ತಾವು ಬೆಳಸ್ಕಂಡು ಬಂದ ಕಲೆನ ಕಾಳಜಿ ಮಾಡಿ ಜೋಪಾನ ಮಾಡ್ತಾರ, ಅದರಿಂದ ನಮ್ಮ ಕುಟುಂಬದ ಗೌರವ ಐತಿ ಅಂತ ನಂಬೋ ಕಾರಣಕ್ಕ. ಇವರ ಸಂಖ್ಯೆ ತುಂಬಾ ತುಂಬಾ ಕಡಿಮಿ. ಇಂಥವರಿಂದಾನ ಬದುಕಲ್ಲಿ ನಂಬಿಕೆ ಇನ್ನೂ ಉಳ್ದಾದ. ●